**ನ್ಯಾಯಾಧೀಶ:** ನಿಮಗೆ ವಿಚ್ಛೇದನ ಏಕೆ ಬೇಕು?

**ಆತ:** ನನ್ನವಳು ಒಂದು ವರ್ಷದಿಂದ ನನ್ನೊಂದಿಗೆ ಮಾತೇ ಆಡುತ್ತಿಲ್ಲ!

**ನ್ಯಾಯಾಧೀಶ:** ಬಹಳ ಒಳ್ಳೆಯ ಹೆಂಡತಿ ನಿಮಗೆ ಸಿಕ್ಕಿದ್ದಾಳೆ. ಇಂಥ ಹೆಂಡತಿ ಎಲ್ಲರಿಗೂ ಸಿಗೋದಿಲ್ಲ. ಇನ್ನೊಮ್ಮೆ ಆಲೋಚಿಸಿ ನೋಡಿ!

***

**ಶ್ರೀನಿವಾಸ:** ಮೂರ್ತಿ, ನೀನು ಬರೆಯುವ ಪ್ರೇಮ ಪತ್ರದಲ್ಲಿ ಹುಡುಗಿ ಹೆಸರನ್ನು ಮಾತ್ರ ಪೆನ್ಸಿಲ್‌ನಲ್ಲಿ ಬರೆಯುತ್ತೀಯಲ್ಲ ಏಕೆ?

**ಮೂರ್ತಿ:** ಒಂದು ವೇಳೆ ನನ್ನ ಪ್ರೇಮವನ್ನು ತಿರಸ್ಕರಿಸಿದರೆ ಆಕೆಯ ಹೆಸರನ್ನು ಅಳಿಸಿ ಹಾಕಿ ಬೇರೆಯವಳ ಹೆಸರು ಬರೆಯೋಕೆ!

***

**ಸುಮಾ:** ಗೀತಾ, ನಿಮ್ಮ ಯಜಮಾನರ ಜೊತೆಯಲ್ಲಿ ಎಲ್ಲಿಗೋ ಹೊರಟಿರುವ ಹಾಗಿದೆ!

**ಗೀತಾ:** ಹೌದು ಸುಮಾ, ಇಲ್ಲೆಲ್ಲೋ ನಾಯಿಗಳ ಪ್ರದರ್ಶನ ಏರ್ಪಡಿಸಿದ್ದಾರಂತಲ್ಲ ಅಲ್ಲಿಗೆ ಕರ್ಕೊಂಡು ಹೋಗ್ತಾ ಇದ್ದೇನೆ!

***

**ಪತ್ನಿ:** ರೀ... ನನಗೆ ದೆವ್ವ ಭೂತಗಳ ಬಗ್ಗೆ ನಂಬಿಕೆ ಬಂತು ಕಣ್ರೀ!

**ಪತಿ:** ಹೇಗೆ ನಂಬಿಕೆ ಬಂತು?

**ಪತ್ನಿ:** ನಿಮ್ಮ ಅಮ್ಮನನ್ನು ನೋಡಿದ ಮೇಲೆ!

***

**ಗೋಪಾಲ:** ರವಿ, ನೀನು ಮದುವೆಯಾದ ಮೇಲೆ ಸಂಸಾರದಲ್ಲಿ ಯಾವ ಮುಖ್ಯ ಬದಲಾವಣೆ ಆಯಿತು?

**ರವಿ:** ಬಹಳ ಮುಖ್ಯ ಬದಲಾವಣೆ ಆಯಿತು. ನನ್ನವಳು ಅಡುಗೆ ಮಾಡುವುದನ್ನು ಮರೆತಳು, ನಾನು ಅಡುಗೆ ಮಾಡುವುದನ್ನು ಚೆನ್ನಾಗಿ ಕಲಿತುಕೊಂಡೆ!

***

**ರಾಮು:** ನಾಣಿ, ನಾನು ನನ್ನ ಹೆಂಡತಿಯನ್ನು ಗಯ್ಯಾಳಿ, ಬಜಾರಿ ಅಂತೆಲ್ಲ ತಿಳ್ಕೊಂಡಿದ್ದೆ. ಆದರೆ ಈಗ ಮೂರು ತಿಂಗಳ ಹಿಂದೆ ಗೊತ್ತಾಯ್ತು ಬಹಳ ಒಳ್ಳೆಯವಳು ಅಂತ!

**ನಾಣಿ:** ಒಳ್ಳೆಯವಳು ಅಂತ ಹೇಗೆ ಗೊತ್ತಾಯ್ತು?

**ರಾಮು:** ಮೂರು ತಿಂಗಳ ಹಿಂದೆ ನನ್ನ ಹೆಂಡತಿ ಸತ್ತು ಹೋದಳು!

***

**ರಮೇಶ:** ಮಹೇಶ, ನಿನಗೆ ಹೆಂಡತಿ ಕಂಡರೆ ಭಯಾನೋ ಇಲ್ಲ ಧೈರ್ಯಾನೋ?

**ಮಹೇಶ:** ಅವಳು ಮನೆಯಲ್ಲಿ ಇದ್ದಾಗ ಭಯ, ಅವಳಿಲ್ಲದಿದ್ದಾಗ ಧೈರ್ಯ!

***

**ಪರಮೇಶಿ:** ರಂಗ, ನಿಮ್ಮ ಮಗಳು ಬಡವರನ್ನು ಮದುವೆ ಆಗಬೇಕು ಅಂತ ಹೇಳುತ್ತಿದ್ದವಳಿಗೆ ನೀನು ಅವಳ ವಿರುದ್ಧವಾಗಿ ನಿಂತು ಶ್ರೀಮಂತನನ್ನು ಮದುವೆ ಮಾಡಿಕೊಟ್ಟೆಯಲ್ಲ ಈಗ ಅವರು ಹೇಗಿದ್ದಾರೆ?

**ರಂಗ:** ನನ್ನ ಮಗಳು ಅವನನ್ನು ಪೂರ್ತಿ ಬಡವನನ್ನಾಗಿ ಮಾಡಿ ತನ್ನ ಆಸೆ ಈಡೇರಿಸಿಕೊಂಡಳು!


***

**ನಾಣಿ:** ರಂಗ, ಹುಚ್ಚು ಹುಚ್ಚಾಗಿ ಆಡ್ತಿದ್ದ ನನ್ನ ಹೆಂಡತಿಯನ್ನು ಡಾಕ್ಟರ್ ಹತ್ತಿರ ಕರೆದುಕೊಂಡು ಹೋದದ್ದೇ ತಪ್ಪಾಯ್ತು

**ರಂಗ:** ಅಂಥಾದ್ದೇನಾಯಿತು?

**ನಾಣಿ:** ಅವರು ಚೆನ್ನಾಗಿಯೇ ಇದ್ದಾರೆ. ನೀವೇ ಹುಚ್ಚು ಹುಚ್ಚಾಗಿ ಆಡ್ತಾ ಇರೋದು ಎಂದು ಹೇಳಿ ನನಗೆ ಇಂಜೆಕ್ಷನ್, ಮಾತ್ರೆ ಕೊಟ್ಟು ಕಳಿಸಿದರು!

***






ಆಗ ಗಾಂಧೀಜಿ ಹೋರಾಡಿ ದೇಶದ ಸ್ವಾತಂತ್ರ್ಯಕ್ಕಾಗಿ ಜೈಲಿಗೆ ಹೋಗಿದ್ದರು. ಈಗ ನೀವು ಇ.ಡಿ., ಹಣವಂಚನೆ ಕೇಸುಗಳಲ್ಲಿ ಜೈಲು ಸೇರ್ತಿದ್ದೀರಲ್ರಿ?

**ನ್ಯಾಯಾಧೀಶ:** ಎಲ್ಲರೂ, ಸ್ವಲ್ಪ ನ್ಯಾಯ ನೀತಿ ಧರ್ಮ ಇಟ್ಕೊಂಡು ಬಾಳುವುದನ್ನು ಕಲಿಯಬೇಕು.

**ಅಪರಾಧಿ:** 'ನೀವು ಕೂಡ ಈ ಮಾತು ಹೇಳ್ತೀರಿ' ಅಂತ ನಾನು ಖಂಡಿತ ಭಾವಿಸಿರಲಿಲ್ಲ!

***

**ಪದ್ಮ:** ಕವಿತಾ, ನಾನು ಮದುವೆಯಾದ ಮೇಲೆ ನಮ್ಮ ಯಜಮಾನ್ರು ಲಕ್ಷಾಧಿಪತಿಯಾದರು.

**ಕವಿತಾ:** ಹೌದಾ? ಮದುವೆಗೆ ಮುಂಚೆ ಅವರೇನಾಗಿದ್ದರು?

**ಪದ್ಮ:** ಅವರು ಆಗ ಕೋಟ್ಯಧಿಪತಿಯಾಗಿದ್ದರು!

***

**ವಕೀಲ:** ಏನಯ್ಯಾ, ಹೆಚ್ಚು ಓದಿಲ್ಲ ಅಂತ ಹೇಳಿದೆ, ಆದರೂ ಜಾಣತನದಿಂದ ಉತ್ತರ ಕೊಟ್ಟೆಯಲ್ಲ.

**ಅಪರಾಧಿ:** ಹೌದು ಸ್ವಾಮಿ, ನೀವು ಹೇಳಿ ಕೊಟ್ಟಿದ್ದ ಸುಳ್ಳು ಉತ್ತರಗಳನ್ನು ಕಂಠಪಾಠ ಮಾಡಿಕೊಂಡು ಬಂದಿದ್ದೆ!

***

**ಪತ್ರಕರ್ತ:** ಅತ್ಯುತ್ತಮ ಸಾಧನೆಯ ನಿಮ್ಮ ಈ ಫುಟ್ಬಾಲಿನ ಹಿಂದಿನ ಗುಟ್ಟೇನಮ್ಮಾ?

**ಆಕೆ:** ಮನೆಯಲ್ಲಿ ನಿರಂತರ ಅಭ್ಯಾಸಕ್ಕೆ ನನ್ನ ಪತಿ ನೀಡಿದ ಸಹಕಾರ!

***

**ನಳಿನಿ:** ಕಮಲ, ನಮ್ಮವರು ಖ್ಯಾತ ಸಂಶೋಧಕರು.

ಕಮಲ: ಏನು ಕಂಡು ಹಿಡಿದಿದ್ದಾರೆ?

**ನಳಿನಿ:** ರಾತ್ರಿ ಕ್ಲಬ್ ನಿಂದ ತಡವಾಗಿ ಮನೆಗೆ ಬಂದಾಗ ಎಷ್ಟು ರೀತಿಗಳಲ್ಲಿ ಹೊಸ ಬಗೆಯ ಸುಳ್ಳುಗಳನ್ನು ಹೇಳಿ ಹೆಂಡತಿಯನ್ನು ನಂಬಿಸಬಹುದು ಅಂತಾ ಸ್ವತಃ ತೋರಿಸಿದ್ದಾರೆ!

***

**ಮಗಳು:** ಅಮ್ಮಾ, ನಮ್ಮ ಯಜಮಾನ್ರು ನಾನು ಹೇಳಿದ ತಕ್ಷಣ ಹೋಟೆಲ್‌ಗೆ ಕರೆದುಕೊಂಡು ಹೋಗುತ್ತಾರೆ.

**ಅಮ್ಮ:** ನೀನೆಲ್ಲೋ ಬಲವಂತ ಮಾಡುತ್ತೀಯ ಅನ್ಸುತ್ತೆ.

**ಮಗಳು:** ಇಲ್ಲಮ್ಮ, 'ರೀ... ಇವತ್ತು ಉಪ್ಪಿಟ್ಟು ಮಾಡ್ತೀನಿ' ಅಂದ ಕೂಡಲೆ ಹೋಟೆಲ್‌ಗೆ ಕರೆದುಕೊಂಡು ಹೋಗ್ತಾರೆ!

***

**ಕೆಲಸದಾಕೆ:** ಅಮ್ಮಾವ್ರೆ, ನಾನು ನಾಳೆಯಿಂದ ನಿಮ್ಮ ಮನೆಗೆಲಸಕ್ಕೆ ಬರೋದಿಲ್ಲ.

**ಮನೆಯಾಕೆ:** ಏಕೆ?

**ಕೆಲಸದಾಕೆ:** ನನಗೆ ಹುಚ್ಚಾಸ್ಪತ್ರೆಯಲ್ಲಿ ಕೆಲಸ ಸಿಕ್ಕಿದೆ.

ಮನೆಯಾಕೆ: ಅಲ್ಲಿ ಕೆಲಸ ಮಾಡಲು ಅನುಭವ ಬೇಕಿಲ್ವ?

**ಕೆಲಸದಾಕೆ:** ನಿಮ್ಮನೇಲಿ ನಾಲ್ಕು ವರ್ಷ ಕೆಲಸ ಮಾಡಿದ್ದೇನೆ ಅಷ್ಟು ಅನುಭವ ಸಾಕು ಅಮ್ಮಾವ್ರೆ!

**ಸಂಗ್ರಹ: ಶಂಕರೇಗೌಡ ತುಂಬಕೆರೆ, ಮಂಡ್ಯ**